ರಾಜ್ಯದ ಕಾಲೇಜುಗಳಲ್ಲಿ ಖಾಲಿಯಿರುವ ಎಂ.ಪಿ.ಇಡಿ ಹುದ್ದೆಗಳು

1430 (2034)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳ ಎಷ್ಟು ಎಂ.ಪಿ.ಇಡಿ ಹುದ್ದೆಗಳು ಖಾಲಿ ಇವೆ?

ಆ) ಈ ಹುದ್ದೆಗಳನ್ನು ತುಂಬದೇ ಇರುವುದಕ್ಕೆ ಕಾರಣವೇನು?

ಇ) ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಬಿ.ಎ.ಮೊಹಿದ್ದೀನ್ (ಉನ್ನತ ಶಿಕ್ಷಣ ಸಚಿವರು):

ಅ) 41 ಹುದ್ದೆಗಳು ಖಾಲಿ ಇವೆ

ಆ ಮತ್ತು ಇ) 41 ಹುದ್ದೆಗಳ ಪೈಕಿ ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾಗಿರುವ 14 ಅಭ್ಯರ್ಥಿಗಳಿಗೆ ಈಗಾಗಲೇ ನೇಮಕಾತಿ ಆದೇಶ ಹೊರಡಿಸಲಾಗಿ ಉಳಿದ 27 ಹುದ್ದೆಗಳಿಗೆ ಯುಜಿಸಿ ನಿಯಮಾವಳಿಗಳ ಪ್ರಕಾರ ಸ್ನಾತಕೋತ್ತರ ಎಂ ಪಿ ಇಡಿ ಪದವಿಯಲ್ಲಿ ಶೇಕಡ 55 ಅಂಕಗಳನ್ನು ಪಡೆದು ಎನ್‌ಇಟಿ/ ಎಸ್‌ಎಲ್‌ಇಟಿ ಪಡೆದ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ, ತುಂಬಲಾಗಿಲ್ಲ. ಆದಾಗ್ಯೂ ಈ ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ತುಂಬಲು ಕ್ರಮಕೈಗೊಳ್ಳಲಾಗುವುದು.

ಉಡುಪಿ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ಕುಡಿಯುವ ನೀರಿನ ಯೋಜನೆ.

1432 (2037)

ಶ್ರೀ ಕೆ.ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ವಿಶ್ವಬ್ಯಾಂಕ್ ಯೋಜನೆಯ ಉಡುಪಿ ಜಿಲ್ಲೆಯಲ್ಲಿ ಮಂಜೂರಾಗಿರುವ ಕುಡಿಯುವ ನೀರಿನ ಯೋಜನೆಗಳಾವುವು?

2. ಅ) ಪೂರ್ಣಗೊಂಡ ಯೋಜನೆಗಳಾವುವು?

ಆ) ಪೂರ್ಣಗೊಳ್ಳದೇ ಇರುವ ಯೋಜನೆಗಳಾವುವು?

3. ಈ ಯೋಜನೆಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಖಾತೆ ಸಚಿವರು):

1. ಮಾದರಿ ಗ್ರಾಮ	-	1 ಗ್ರಾಮ
ಹಂತ- 1	-	8 ಗ್ರಾಮಗಳು
ಹಂತ- 2	-	15 ಗ್ರಾಮಗಳು
ಒಟ್ಟು		24 ಗ್ರಾಮಗಳು

ವಿವರ ಈ ಕೆಳಗಿನಂತಿದೆ:

1. ಮಾದರಿ ಗ್ರಾಮ- ಹೊಂದಬಾಡಿ ಮಂದಡಿ

2. ಹಂತ- 1

ಉಡುಪಿ ತಾಲ್ಲೂಕು

1. ಟೆಂಕನಡಿಯೂರು
2. ವಾರಂಬಳ್ಳಿ
3. ಶಿವಳ್ಳಿ
4. ಮುಳೂರು

ಕುಂದಾಪುರ ತಾಲ್ಲೂಕು

1. ಕಾಡೂರು
2. ಶಂಕರನಾರಾಯಣ

ಕಾರ್ಕಳ ತಾಲ್ಲೂಕು

1. ಕುಕ್ಕಂದೂರು
2. ಮುದಾರು
3. ಹಂತ-2

ಉಡುಪಿ ತಾಲ್ಲೂಕು

1. ಕುಂಬರಗೋಡು
2. ಆರೂರು
3. ಮುನ್ನಾರು
4. 52-ಹೆರೂರು
5. ಕುಕ್ಕಂಜಿ
6. ಬೇಳೂರು
7. ಆಲ್ವಾಡಿ
8. ಬೊಸಡು
9. ಭಕ್ಕಲಾಡಿ
10. ಅತ್ತೂರು
11. ಭಳ್ಳಿಹೊಳೆ
12. ಅಂಪಾಪಪೂರು
13. ಹೆಬ್ರಿ

ಕಾರ್ಕಳ ತಾಲ್ಲೂಕು

1. ಮಾಳ
2. ಕಾಡೂರು

2ಅ) ಒಟ್ಟು 4 ಗ್ರಾಮಗಳು

2ಆ) ಒಟ್ಟು 20 ಗ್ರಾಮಗಳು

ವಿವರ ಈ ಕೆಳಗಿನಂತಿವೆ

ಅ) ಪೂರ್ಣಗೊಂಡ ಯೋಜನೆಗಳು

ಮಾದರಿ ಗ್ರಾಮ	ಹೊಂಬಾಡಿ ಮಂದಡಿ
ಹಂತ- 1	1. ಟಿಂಕನಡಿಯೂರು
	2. ವಾರಂಬಳ್ಳಿ
	3. ಮೂಳೂರು

ಆ) ಪೂರ್ಣಗೊಳ್ಳದೇ ಇರುವ ಯೋಜನೆಗಳು

ಹಂತ- 1	1. ಶಿವಳ್ಳಿ
	2. ಕಾಡೂರು
	3. ಶಂಕರ ನಾರಾಯಣ
	4. ಕುಕ್ಕಂದೂರು
	5. ಮುದಾರು
ಹಂತ- 2	1. ಕುಂಬರಗೋಡು
	2. ಅರೂರು
	3. 52- ಹೆರೂರು
	4. ಕುಕ್ಕಂಜೆ
	5. ಬೇಳೂರು
	6. ಅಲ್ವಾಡಿ
	7. ಹೊಟಡು

8. ಹಕ್ಕಲಾಡಿ

9. ಚಿತ್ತೂರು

10. ಹಳ್ಳಿಹೊಳೆ

11. ಅಂಪಾರು

12. ಹೆಬ್ರಿ

13. ಮಾಳ

14. ಕಾಡೂರು

3. ಡಿಸೆಂಬರ್ -99 ರ ಅಂತ್ಯದ ಒಳಗೆ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು.

ವೈದ್ಯಕೀಯ ಶಿಕ್ಷಣದಲ್ಲಿನ ಸೀಟುಗಳು.

1434 (2048)

ಶ್ರೀ ಎ.ರಾಮದಾಸ್ (ಕೃಷ್ಣರಾಜ): ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ನಾತಕೋತ್ತರ ವೈದ್ಯಕೀಯ ಮತ್ತು ದಂತ ಶಿಕ್ಷಣದಲ್ಲಿರುವ ಸೀಟುಗಳ ಸಂಖ್ಯೆ ಎಷ್ಟು, ಖಾಸಗಿ ಸಂಸ್ಥೆಗಳಲ್ಲಿ ಇರುವ ಸೀಟುಗಳ ಸಂಖ್ಯೆ ಎಷ್ಟು?

ಆ) ಸರ್ಕಾರಿ ಮೆರಿಟ್ ಸೀಟುಗಳ ಸಂಖ್ಯೆ ಎಷ್ಟು; ಆಡಳಿತ ಮಂಡಳಿಯ ಸಂಖ್ಯೆ ಎಷ್ಟು?

ಡಾ: ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ) ಸ್ನಾತಕೋತ್ತರ ವೈದ್ಯಕೀಯ ಒಟ್ಟು ಸೀಟುಗಳ ಸಂಖ್ಯೆ - 1267

ಸ್ನಾತಕೋತ್ತರ ದಂತ ಶಿಕ್ಷಣ ಒಟ್ಟು ಸೀಟುಗಳ ಸಂಖ್ಯೆ - 254

ಖಾಸಗಿ ವೈದ್ಯಕೀಯ ಕಾಲೇಜು ಗಳಲ್ಲಿರುವ ಒಟ್ಟು ಸ್ನಾತಕೋತ್ತರ ವೈದ್ಯಕೀಯ ಸೀಟುಗಳು - 888